ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 18/2023

.........................................................................

CW 01
PW 01

| | | |
|---|---|---|
| ಹೆಸರು | : | ಮೋಹನ ಬಿಡಿಕರ |
| ತಂದೆಯ ಹೆಸರು | : | ಕೃಷ್ಣಾ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಹಳಿಯಾಳ ಪಟ್ಟಣ. |

ದಿನಾಂಕ 27-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 2 ಮತ್ತು 3 ರವರು ಪರಿಚಯ. ಚಾಸಾ 4 ರವರು ನನ್ನ ಹೆಂಡತಿ. ಚಾಸಾ 5 ರವರು ನನ್ನ ಪರಿಚಯದವರು ಅವರು ಈಗ ಮರಣ ಹೊಂದಿರುತ್ತಾರೆ. ಆರೋಪಿ ನನ್ನ ಮಗ.

ಆರೋಪಿ ಸುಮಾರು 20 ವರ್ಷಗಳಿಂದ ಯಾವುದೇ ಕೆಲಸ ಮಾಡದೇ ಖಾಲಿ ತಿರುಗಾಡುತ್ತಿದ್ದ. ನನಗೆ ಹೊಡೆಯಲು ಬರುವುದು, ಚಾಕು ತೋರಿಸಿ ಹೆದರಿಸುವುದು ಮಾಡುತ್ತಿದ್ದ. ಸಾರಾಯಿ ಕುಡಿಯಲು ಆಗಾಗ ಹಣ ಕೇಳುತ್ತಿದ್ದ, ಕೆಟ್ಟ ಶಬ್ದಗಳಿಂದ ನನಗೆ ಮತ್ತು ನನ್ನ ಹೆಂಡತಿಗೆ ಬೈಯ್ಯುತ್ತಿದ್ದ. ದಿನಾಂಕ 09-12-2022 ರಂದು ಮಧ್ಯಾಹ್ನ 12-00 ರಿಂದ 01-00 ಗಂಟೆಯ ಸಮಯದಲ್ಲಿ ಆರೋಪಿ ನನಗೆ ಹಣ ಕೇಳಿದ ನಾನು ಕೊಡುವುದಿಲ್ಲ ಎಂದು ಕೇಳಿದಾಗ ಆತನು ನನಗೆ ಕೈಯಲ್ಲಿ ಹೊಡೆಯಲು ಬಂದ. ನನಗೆ ಆರೋಪಿ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ಚಾಸಾ 4 ರವರು ಏಕೆ ಬೈಯುತ್ತಿದ್ದಿ ಎಂದು ಕೇಳಿದಾಗ ಅವರಿಗೆ ಕಟ್ಟಿಗೆಯಿಂದ ಎಡಗೈ ಮೊಣಕೈಗೆ ಹೊಡೆದ. ಆರೋಪಿ ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದ. ಈ ವಿಚಾರವಾಗಿ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ

ಗುರುತಿಸಿದ ಮೇರೆಗೆ ದೂರನ್ನು **ನಿಪಿ 1 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 1 ಎ ಎಂದು** ಗುರುತಿಸಲಾಯಿತು.

ಅದೇ ದಿನ 04-00 ರಿಂದ 05-00 ಗಂಟೆಯ ಸಮಯದಲ್ಲಿ ನಾನು ತೋರಿಸಿದ ಘಟನಾ ಜಾಗದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಕಟ್ಟಿಗೆಯನ್ನು ಜಪ್ತುಪಡಿಸಿಕೊಂಡು. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಲಾಯಿತು. ಸಾಕ್ಷಿಗೆ ಎರಡು ಭಾವಚಿತ್ರವನ್ನು ತೋರಿಸಲಾಗಿ ಅವುಗಳಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ. ಅವುಗಳನ್ನು ಒಟ್ಟಾರೆಯಾಗಿ **ನಿಪಿ 3 ಎಂದು** ಗುರುತಿಸಲಾಯಿತು.

ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಕಟ್ಟಿಗೆಯನ್ನು ನೋಡಿದರೆ ಗುರುಸುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 09-12-2022 ರಂದು ಬೆಳಗ್ಗೆ 11-00 ಗಂಟೆಗೆ ನಡೆಯಿತು ಎಂದರೆ ಸರಿ. ಆ ದಿನ ಆರೋಪಿ ನಿಮಗೆ ಮತ್ತು ಚಾಸಾ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದನು ಎಂದರೆ ಸರಿ. ಆರೋಪಿ ನಿಮಗೆ ಮತ್ತು ಚಾಸಾ 4 ರವರಿಗೆ ಬೆನ್ನಿಗೆ ಹೊಡೆದು ಒಳಪೆಟ್ಟು ಮಾಡಿದ್ದರು ಎಂದು ದೂರಿನಲ್ಲಿ ಬರೆಯಿಸಿರುತ್ತೀರಿ ಎಂದರೆ ಸರಿ. ಆ ದಿನ ಚಾಸಾ 4 ರವರನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಮ್ ಎಚ್ ಎಮ್ ವಕೀಲರಿಂದ.

ಆರೋಪಿ ನಿಮಗೆ ಕೈಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನಿಮಗೆ ಮತ್ತು ಚಾಸಾ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿ ಸಾರಾಯಿ ಕುಡಿಯಲು ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ನಡೆದಿಲ್ಲ ಹಾಗಾಗಿ ಸಮಯದ

ಬಗ್ಗೆ ನಿರ್ದಿಷ್ಟವಾಗಿ ಹೇಳದೇ ಘಟನೆ ನಡೆದಿದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಮತ್ತು ಚಾಸಾ 4 ರವರಿಗೆ ಕಟ್ಟಿಗೆಯಿಂದ ಹೊಡೆದಿಲ್ಲ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಹೊಡೆದು ಒಳಪೆಟ್ಟು ಮಾಡಿಲ್ಲ ಎಂದರೆ ಸರಿಯಲ್ಲ.

ಆರೋಪಿ ನಿಮ್ಮ ಮೊದಲನೇ ಹೆಂಡತಿ ಮಗ ಎಂದರೆ ಸರಿ. ನೀವು ನಿಮ್ಮ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ಆ ಆಸ್ತಿಗಳಲ್ಲಿ ಆರೋಪಿತನಿಗೆ ಹಕ್ಕು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿತನ ಹೆಸರಿನಲ್ಲಿ 4 ಲಕ್ಷ ಹಣವನ್ನು ಜಮಾ ಇಟ್ಟಿದ್ದೇನೆ. ಆರೋಪಿತನ ಹೆಸರಿನಲ್ಲಿ 4 ಲಕ್ಷ ಹಣವನ್ನು ಜಮಾ ಇಟ್ಟ ಹಣವನ್ನು ವಾಪಸ್ ಕೊಡುವಂತೆ ಆರೋಪಿನಿಗೆ ನೀವು ಮತ್ತು ಚಾಸಾ 4 ರವರು ಆಗಾಗ ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ಸಂಬಂಧಿಸಿದ ಹಣವನ್ನು ನೀವು ಮತ್ತು ಚಾಸಾ 4 ರವರು ಲಪಾಟಾಯಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಮೊದಲನೆ ಹೆಂಡತಿಯ ಮಗ ಆಗಿದ್ದರಿಂದ ಚಾಸಾ 4 ರವರು ಆರೋಪಿ ಚಿಕ್ಕವನಿದ್ದಾಗಿನಿಂದಲೂ ಕಿರುಕುಳ ನೀಡುತ್ತಿದ್ದರು, ನೀವು ಚಾಸಾ 4 ರವರಿಗೆ ಅದಕ್ಕೆ ಸಹಕಾರ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನ ಹಣವನ್ನು ಆತನಿಗೆ ವಾಪಸ್ ಕೊಡಬೇಕಾಗುತ್ತದೆ ಎಂದು ನೀವು ಮತ್ತು ಚಾಸಾ 4 ರವರು ಆರೋಪಿತನ ವಿರುದ್ಧ ಸುಳ್ಳು ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ. ನೀವು ನೀಡಿದ ಸುಳ್ಳು ದೂರಿಗೆ ಅನುಕೂಲ ಆಗಲು ಪೊಲೀಸರಿಗೆ ಸುಳ್ಳು ಘಟನಾ ಜಾಗವನ್ನು ತೋರಿಸಿರುತ್ತೀರಿ ಎಂದರೆ ಸರಿಯಲ್ಲ. ಅಲ್ಲಿ ಬಿದ್ದ ಕಟ್ಟಿಗೆಯನ್ನು ತೋರಿಸಿ ಅದೇ ಕಟ್ಟಿಗೆಯಿಂದ ಆರೋಪಿ ಚಾಸಾ 4 ರವರಿಗೆ ಹೊಡೆದ ಎಂದು ಪೊಲೀಸರಿಗೆ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನೀವು ನೀಡಿದ ಸುಳ್ಳು ದೂರಿಗೆ ಅನುಕೂಲ ಆಗಲು ಪಂಚನಾಮೆಗೆ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ 4 ರವರು ಜಾರಿಬಿದ್ದ ಗಾಯವನ್ನು ಆರೋಪಿ ಹೊಡೆದ ಎಂದು ಆತನ ವಿರುದ್ಧ ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಆತನ ವಿರುದ್ಧ ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.